ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈಗ ಮಾನ್ಯ ಮಂತ್ರಿಗಳು ಹೇಳಿದರು ಲ್ಯಾಂಡ್ ಗ್ರಾಂಟ್ ರೂಲ್ಸಿಗೆ ವಿರುದ್ಧವಾಗಿ ಏನಾದರೂ ಜಮೀನು ಮಂಜೂರಾತಿಗಳು ನಡೆದಿದ್ದರೆ ಅಂಥವುಗಳನ್ನು ರದ್ದು ಮಾಡುವುದಕ್ಕೆ ನಾವು ಸಿದ್ಧವಾಗಿದ್ದೇವೆ ಎಂದು. ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಶೇಕಡಾ 50 ಭಾಗ ಜಮೀನನ್ನು ಪರಿಶಿಷ್ಟ ಜಾತಿಯವರಿಗೆ, ಮತ್ತು ಪರಿಶಿಷ್ಟ ವರ್ಗದವರಿಗೆ ಕೊಡಬೇಕು ಎಂದು ಇದೆ. ಹಾಗಾದರೆ ಯಾವುದಾದರೂ ಒಂದು ತಾಲ್ಲೂಕು ಸಮಿತಿಯವರಾದರೂ ಲ್ಯಾಂಡ್‌ಗ್ರಾಂಟ್ ರೂಲ್ಸ್ ಪ್ರಕಾರ ಆ ಜನಾಂಗದವರಿಗೆ 50 ಪರ್ಸೆಂಟ್ ಲ್ಯಾಂಡ್ ಕೊಟ್ಟಿದ್ದಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನ ಮುಂದೆ ಆ ಅಂಕಿ ಅಂಶಗಳು ಸಧ್ಯದಲ್ಲಿ ಇಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಆ ಕಮಿಟಿಗಳವರಿಗೆ ಏನೇನು ಅಧಿಕಾರ ಇದೆಯೆಂಬುದನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪ್ರತಿ ತಿಂಗಳು ದರ್ಖಾಸ್ತು ಅರ್ಜಿಗಳು ಬರುವುದನ್ನು ತಹಶೀಲ್ದಾರರು ಯಾವ ಯಾವ ಊರಿನಿಂದ ಅರ್ಜಿಗಳು ಬಂದಿವೆ, ಅವರು ಕೇಳಿರತಕ್ಕ ಕಡೆ ಜಮೀನು ಇದೆಯೇ ಹೇಗೆ ಎಂಬುದನ್ನೆಲ್ಲಾ ನೋಡಿಕೊಂಡು ಆ ಅರ್ಜಿಗಳನ್ನು ಒಂದು ಕಡೆ ಇಟ್ಟು ಯಾರು ಯಾರಿಗೆ ಎಷ್ಟೆಷ್ಟು ಕೊಡಬಹುದು ಎಂಬುದನ್ನು ಅವರು ಕಮಿಟಿಯ ಮುಂದೆ ಸಲಹೆ ಮಾಡುತ್ತಾರೆ. ಅವರು ಸಲಹೆ ಮಾಡಿದಮೇಲೆ ಕಮಿಟಿಯವರು ಆ ಬಗ್ಗೆ ತೀರ್ಮಾನ ಮಾಡುತ್ತಾರೆ.

Sri D. B. KALMANKAR.—May I know how many acres of land have been so far distributed ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಸಮಿತಿಗಳು ರಚನೆಯಾದಾಗಿನಿಂದ ಇಲ್ಲಿಯವರೆಗೆ ಎಷ್ಟು ಭೂಮಿಯನ್ನು ಹಂಚಿಕೆ ಮಾಡಿದ್ದಾರೆ ಎನ್ನುತಕ್ಕ ಅಂಕಿ ಅಂಶಗಳು ಈಗ ಇಲ್ಲ ನನ್ನ ಮುಂದೆ ಇಲ್ಲ.

Sites for Harijans of Anjur

25. Sri G. PUTTASWAMY (Mudigere).—

Will the Minister for Community Development and Social Welfare be pleased to state:—

(*a*) whether it has come to the notice of Government that the Harijan residents, at Anjur Village, Gonibeedu Hobli, Mudigere Taluk have no sites of their own ;

(*b*) if so, whether they have decided to acquire the said lands to facilitate the said Harijans to live in ;

(*c*) if so, the action taken by Government so far in the matter ?

Sri M. MALLIKARJUNASWAMY (Minister for Community Development and Social Welfare).—

(*a*) No.

(*b*) Does not ariss in view of the reply to clause (*a*).

(*c*) Does not arise in view of the reply to clause (*a*).

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಅಲ್ಲಿ ಹರಿಜನರು ಖಾನಗೀ ಜಮೀನಿನಲ್ಲಿ ವಾಸ ಮಾಡುತ್ತಿದ್ದಾರೆ. ಅವರಿಗೆ ನಿವೇಶನವನ್ನು ಕೊಡಲು ಅದನ್ನು ಅಕ್ವೈರ್ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆಲ್ಲರತಕ್ಕ ಜನಗಳಿಂದ ಅರ್ಜಿಗಳು ಬಂದರೆ ಅದನ್ನು ಪರಿಗಣಿಸುತ್ತೇವೆ. ಅಲ್ಲಿ ಸರ್ಕಾರಿ ಜಮೀನು ಇಲ್ಲದಿದ್ದರೆ, ಒಂದು ವೇಳೆ ಅಲ್ಲ ಖಾಸಗೀ ಜಮೀನು ಇದ್ದರೆ ಅದನ್ನು ಅಕ್ಯೈರ್ ಮಾಡಿ ಕೊಡುತ್ತೇವೆ.

ಶ್ರೀ ಪಿ. ಪುಟ್ಟಸ್ವಾಮಿ.—ಸೈಟು ಇಲ್ಲದೆ ಇರುವವರಿಗೆ ಸೈಟು ಹಂಚಬೇಕೆಂದು ಸರ್ಕಾರದವರು ಪಟ್ಟಿಯನ್ನು ತಯಾರು ಮಾಡುತ್ತಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಹೌದು.

ಶ್ರೀ ಪಿ. ಪುಟ್ಟಸ್ವಾಮಿ.—ಹಾಗೆಂದ ಮೇಲೆ ಪ್ರಶ್ನೆ ಕೇಳಿದ ನಂತರವೂ ಜಮೀನು ಅಕ್ವಯರ್ ಮಾಡಿಸಬೇಕೆಂದು ತಿಳಿಯಲಿಲ್ಲವೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅರ್ಜಿಗಳು ಬರುವುದಾದರೆ, ಅದರ ಮೇಲೆ ಅವರ ಅವಶ್ಯಕತೆಗಳನ್ನು ನೋಡಿಕೊಂಡು ಜಮೀನು ಅಕ್ವಯರ್ ಮಾಡಿ ಸೈಟನ್ನು ಕೊಡುತ್ತೇವೆ.

ಶ್ರೀ ಪಿ. ಪುಟ್ಟಸ್ವಾಮಿ.—ಅವರು ನಿರ್ಗತಿಕರು ಮತ್ತು ಬಹಳ ಬಡ ಜನರಾಗಿದ್ದಾರೆ. ಅವರು ಸೈಟ್ ಇಲ್ಲದೆ ಇದ್ದ ಜನರಾಗಿರುತ್ತಾರೆ. ಸೈಟ್ ಇಲ್ಲದವರಿಗೆ ಸೈಟ್ ಕೊಡಬೇಕೆಂದು ಸರ್ಕಾರದ ನಿಯಮ ಕೂಡ ಇದೆ. ಆದ್ದರಿಂದ ಈ ಪ್ರಶ್ನೆ ಸರ್ಕಾರಕ್ಕೆ ಹೋದರೂ ಅದಕ್ಕೆ ಬೇಕಾದ ಜಮೀನನ್ನು ಅಕ್ವಯರ್ ಮಾಡುವುದಕ್ಕೆ ಅಧಿಕಾರಿಗಳಿಗೆ ಏನು ಕಷ್ಟವಾಗಿದೆ ? ದಯವಿಟ್ಟು ಅಧಿಕಾರಿಗಳಿಗೆ ಇದರ ತಿಳುವಳಿಕೆಯನ್ನು ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅಧಿಕಾರಿಗಳಿಗೆ ಈಗಾಗಲೇ ತಿಳುವಳಿಕೆಗೆ ಕೊಟ್ಟಿದ್ದೇವೆ. ಮತ್ತು ಅದೇ ಪ್ರಕಾರ ಯಾರ್ಯಾರಿಗೆ ಸೈಟು ಇಲ್ಲವೆಂಬುದನ್ನು ನೋಡಿಕೊಂಡು ಅವರು ಒಂದು ಪಟ್ಟಿಯನ್ನು ಮಾಡುತ್ತಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಪ್ರದೇಶದಲ್ಲಿ ಜಮೀನು ಅಥವಾ ಸೈಟ್ ಇಲ್ಲದಿರತಕ್ಕ ಹರಿಜನರ ಮನೆಗಳು ಎಷ್ಟು ಇವೆ ; ಮತ್ತು ಆ ಜನರಿಗೆ ಸೈಟುಗಳನ್ನು ಕೊಡುವುಕ್ಕೆ ಏನು ಏರ್ಪಾಡು ಮಾಡುತ್ತೀರಿ ಮತ್ತು ಅದನ್ನು ಎಷ್ಟು ದಿವಸಗಳಲ್ಲಿ ಮಾಡುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದಕ್ಕೆ ಒಂದು ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಿ.

Sri V. N. PATIL.—In general interest I am asking the question, Sir. The Hon'ble Member was asking whether Government will take notice *Suo motu* of the questions put in the Assembly and whether Government will ask subordinate officers to take action accordingly ?

Sri M. MALLIKARJUNASWAMY.—Yes.

Sri V. N. PATIL.—Shall I take it as an assurance ?

Sri M. MALLIKARJUNASWAMY.—Yes.

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಈಗ ಸೈಟ್ ಇಲ್ಲದಿರತಕ್ಕವರಿಗೆ ಸೈಟ್ ಕೊಡಬೇಕೆಂದು ಈಗಾಗಲೇ ನಾವು ಹೇಳಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅನೇಕ ಜನರಿಗೆ ಹಳ್ಳಿಗಳಲ್ಲಿ ಜಮೀನು ಅಕ್ವಯರ್ ಮಾಡುವುದಕ್ಕೆ ಜಮೀನ್ದಾರರನ್ನು ಅಥವಾ ಇತರ ಆಲ್ಲರತಕ್ಕ ಮುಖಂಡರನ್ನು ಕೇಳುವುದಕ್ಕೆ ಧೈರ್ಯ ಇರುವುದಿಲ್ಲ ; ಮತ್ತು ಅದಕ್ಕೆ ಬೇಕಾದ ಅರ್ಜಿ ಕೊಡುವುದಕ್ಕೂ ಶಕ್ತಿ ಇರುವುದಿಲ್ಲ. ಏಕೆಂದರೆ ಹಾಗೇನಾದರೂ ಕೇಳಿ ಬಿಟ್ಟರೆ, ಆಲ್ಲರತಕ್ಕ ದೊಡ್ಡ ಮನುಷ್ಯರು ಅಥವಾ ಲೀಡರ್ಸ್ ಈ ರೀತಿ ಕೇಳಿದವರ ಮೇಲೆ ಕಣ್ಣಿಟ್ಟು ಅವರಿಗೆ ತೊಂದರೆ ಕೊಡತಕ್ಕ ಸಂದರ್ಭ ಬರಬಹುದು ಎಂದು. ಅದಕ್ಕೆ ನಾವು ಏನು ಮಾಡುತ್ತೇವೆಂದರೆ, ಸೈಟ್ ಇಲ್ಲದಿರತಕ್ಕ ಜನರಿಗೆ ಮತ್ತು ಮನೆ ಇಲ್ಲದಿರತಕ್ಕ ಜನರಿಗೆ ಸೈಟುಗಳನ್ನು ಕೊಡುವ ವ್ಯವಸ್ಥೆ ಮಾಡುತ್ತೇವೆ. ಮೊದಲನೆಯದಾಗಿ ಜಮೀನು ಇಲ್ಲದಂತಹ ಜನರಿಗೆ ಇದನ್ನು ಕೊಡುತ್ತೇವೆ. ಕೇಂದ್ರ ಸರ್ಕಾರದ ಸ್ಕೀಂ ಪ್ರಕಾರ ಲ್ಯಾಂಡ್‌ಲೆಸ್ ಮತ್ತು ಸೈಟ್‌ಲೆಸ್ ಜನರಿಗೆ ಸೈಟನ್ನು ಕೊಡಬೇಕೆಂಬ ನಿಯಮ ಇದೆ. ಅಕಸ್ಮಾತ್ ಅಕ್ವಯರ್ ಮಾಡಿದಂತಹ ಜಮೀನು ಇಲ್ಲದಿದ್ದಲ್ಲಿ ಅದಕ್ಕೆ ಬೇಕಾದ ಜಮೀನನ್ನು ನುಪೂ ವೋಚೋ ಅಕ್ವಯರ್ ಮಾಡಿ, ಅಕ್ಸಿಸಿತನ್ ಪ್ರೊಸೀಡಿಂಗ್ಸ್ ಪ್ರಾರಂಭ ಮಾಡುವುದಕ್ಕೆ ಶುರುಮಾಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಕೊಟ್ಟಂತಹ ಜಮೀನು ಏನಿದೆ ಅದನ್ನು ಅವರು ಪರಭಾರೆ ಮಾಡದಹಾಗೆ ತಾವು ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅದನ್ನೂ ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ. ಆಮೇಲೆ ಇನ್ನೊಂದು, ಎಷ್ಟು ಸಮಯದಲ್ಲಿ ಮಾಡುತ್ತೀರೆಂದು ಕೇಳಿದರು. ಅದನ್ನು ಸಾಧ್ಯವಾದರೆ ಒಂದು ವರ್ಷದಲ್ಲಿ ಪೂರೈಸುತ್ತೇವೆ. ಒಂದು ವೇಳೆ ಈ ಅಕ್ವಿಸಿಶನ್ ಪ್ರೊಸೀಡಿಂಗ್ಸ್ ಆಗಬೇಕಾಗಿರುವುದರಿಂದ ಸ್ವಲ್ಪಮಟ್ಟಿಗೆ ಅಡಚಣೆ ಬಂದರೂ, ಅದನ್ನು ಆದಷ್ಟು ಜಾಗ್ರತೆ ಮಾಡುತ್ತೇವೆ.

Scheme for Digging Irrigation Wells in Sindgi Taluk

89. Sri S. Y. PATIL (Sindgi).—

Will the Minister for Revenue be pleased to state :—

(*a*) whether it has come to the notice of the Government that Sindgi Taluk in Bijapur District is always affected by famine ;

(*b*) whether the Government is aware that digging of irrigation wells is essential for famine relief in this area ;

(*c*) if so, whether any scheme has been prepared for digging atleast 50 wells in each town and if so, the nature of the same ;

Sri N. HUTCHAMASTHY GOWDA (Minister for Revenue).—

(*a*) Yes, for the last few years the seasonal conditions are not good.

(*b*) Yes.

(*c*) There are already more than 4,500 wells in Sindgi Taluk. The wells would not be dug in this area as the northern part of this taluk will be benefited by the Upper Krishna Project. If in the other part of taluk the Geology Department after conducting the Survey are of the opinion that wells could be dug, arrangements would be made to provide loans through the Land Development Bank.

ಶ್ರೀ ಎಸ್. ವೈ. ಪಾಟೀಲ್.—ತಮ್ಮ ಉತ್ತರದಲ್ಲಿ ಸಿಂದಗಿ ತಾಲ್ಲೂಕಿನ ಉತ್ತರ ಭಾಗವು ಕೃಷ್ಣಾ ನದಿಯ ಮೇಲ್ದಂಡೆ ಯೋಜನೆಗೊಳಪಟ್ಟಿದ್ದು, ಬಾವಿಗಳನ್ನು ತೋಡಿಸಲಾಗುವುದಿಲ್ಲವೆಂದು ಹೇಳಿದ್ದೀರಿ. ಆದರೆ ಸಿಂದಗಿ ತಾಲ್ಲೂಕಿನ ಪೂರ್ವ ಭಾಗಕ್ಕೆ ಕಲವೇ ಹಳ್ಳಿಗಳಿವೆ. ಅವು ಕೃಷ್ಣಾ ಮೇಲ್ದಂಡೆಯ ಭಾಗಕ್ಕೆ ಬರುವುದಿಲ್ಲವೆಂದು ತಮಗೆ ಗೊತ್ತಿದೆಯೇ ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನಗೂ ಇದರ ಬಗ್ಗೆ ಸ್ವಲ್ಪ ಅನುಮಾನ ಬಂತು. ಕುತೂಹಲದಿಂದ ಭೂಪಟ ತರಿಸಿ ನೋಡಿದೆ. ಅದೂ ಅಲ್ಲದೆ ತಾವು ಹೇಳಿದ್ದರಿಂದ ಅದನ್ನು ತಿದ್ದಿಕೊಳ್ಳುತ್ತೇನೆ.

ಶ್ರೀ ಎಸ್. ವೈ. ಪಾಟೀಲ್.—ಸಾಧಾರಣವಾಗಿ ಉಳಿದ ಕಡೆಗಳಲ್ಲಿ ಜನರಿಂದ ಅರ್ಜಿ ಬಾರದೆ ಈ ಬಂಡಿಂಗ್ ಇರಾಜೆಯ ಮೂಲಕ ಬಾವಿಗಳನ್ನು ತೋಡಿಸಿ ಕೊಡುವ ಏರ್ಪಾಡು ಮಾಡುತ್ತಾರೆ. ಅದೇ ರೀತಿ ಇಲ್ಲಿಯ ಹಳ್ಳಿಗಳಲ್ಲಿಯೂ ಬಾವಿಗಳನ್ನು ತೋಡಿಸಿ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದು ಯೋಚನೆ ಮಾಡಬೇಕಾದ ಉತ್ತಮವಾದ ನಲಹೆ.

ಶ್ರೀ ಎಸ್. ವೈ. ಪಾಟೀಲ್.—ಯಾವಾಗ ಅದನ್ನು ಯೋಚನೆ ಮಾಡುತ್ತೀರಿ ಸ್ವಾಮಿ ?